ಮೈಸೂರು ವಿಶ್ವವಿದ್ಯಾನಿಲಯ

# ಯುವರಾಜ ಕಾಲೇಜು

ಜೆ.ಎಲ್.ಬಿ.ರಸ್ತೆ ಮೈಸೂರು-570 005.

**ನಂ : ಯುಕಾಮೈ/ಸ್ನಾತಕ/ಎಡಿ-01/ / 2025-26** **ದಿನಾಂಕ: 12-04-2025**

## ಪ್ರಕಟಣೆ-01

2025-26ನೇ ಸಾಲಿನ ಪ್ರಥಮ ಬಿ.ಎಸ್ಸಿ / ಬಿ.ಬಿ.ಎ. / ಬಿ.ಸಿ.ಎ. ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿಯನ್ನು ಕಾಲೇಜಿನ ಕಛೇರಿಯಲ್ಲಿ ಈ ಕೆಳಕಂಡ ನಿಗಧಿತ ಸಮಯದಲ್ಲಿ ಶುಲ್ಕ ರೂ.100/-ಗಳನ್ನು ಪಾವತಿಸಿ ಅರ್ಜಿ ಪಡೆಯುವುದು. ಭರ್ತಿ ಮಾಡಿದ ಅರ್ಜಿಯ ಜೊತೆ ಮೂಲ ರಶೀತಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ದ್ವಿತೀಯ ಪಿ.ಯು.ಸಿ ಅಂಕಪಟ್ಟಿ (Internet copy or Original copy), ಜಾತಿ, ಆದಾಯ ಪ್ರಮಾಣ ಪತ್ರ ಮತ್ತು ಆಧಾರ್‌ಕಾರ್ಡ್ ಜೆರಾಕ್ಸ್ ಪ್ರತಿಯೊಂದಿಗೆ ದಿನಾಂಕ: 15.04.2025 ರಿಂದ ದಿನಾಂಕ:25.04.2025ರ ಕಛೇರಿ ಸಮಯದೊಳಗೆ ಸಲ್ಲಿಸತಕ್ಕದ್ದು. ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅರ್ಜಿ ಸಲ್ಲಿದ ವಿದ್ಯಾರ್ಥಿಗಳಿಗೆ ದಿನಾಂಕ:02.05.2025ರಿಂದ ಪ್ರವೇಶಾತಿ ನೀಡಲಾಗುವುದು.

**ಬಿ.ಎಸ್ಸಿ/ಬಿಸಿಎ/ಬಿಬಿಎ ಅರ್ಜಿ ಶುಲ್ಕ : ರೂ.100/-**

***ಅರ್ಜಿ ನೀಡುವ ಮತ್ತು ತೆಗೆದುಕೊಳ್ಳುವ ಸಮಯ***

ಬೆಳಿಗ್ಗೆ : 10.30 ರಿಂದ 1.30 ಮತ್ತು
ಮಧ್ಯಾಹ್ನ : 2.30 ರಿಂದ 4.30 ಗಂಟೆಯವರೆಗೆ

**ವಿಶೇಷ ಸೂಚನೆ:-**

1) ಪ್ರತಿ ಕೋರ್ಸಿಗೆ ಪ್ರತ್ಯೇಕವಾಗಿಯೇ ಅರ್ಜಿಗಳನ್ನು ಪಡೆದು ಸಲ್ಲಿಸಬೇಕು.
2) ಒಮ್ಮೆ ಪಡೆದ ಅರ್ಜಿಯನ್ನು ಹಿಂಪಡೆಯಲಾಗುವುದಿಲ್ಲ, ಬದಲಾಯಿಸುವುದಿಲ್ಲ, ಬೇರೆಯವರಿಗೆ ವರ್ಗಾಯಿಸುವಂತಿಲ್ಲ.
3) ಬಿ.ಸಿ.ಎ ಕೋರ್ಸಿಗೆ ಅರ್ಜಿ ತೆಗೆದುಕೊಳ್ಳುವವರು ದ್ವಿತೀಯ ಪಿ.ಯು.ಸಿ ಯಲ್ಲಿ Mathematics ಅಥವಾ Computer Science ಓದಿರಲೇಬೇಕು.
4) ಪ್ರಥಮ ಬಿ.ಎಸ್ಸಿ. ಬಿ.ಸಿ.ಎ ಮತ್ತು ಬಿ.ಬಿ.ಎ ಕೋರ್ಸಿಗೆ ಅರ್ಜಿ ಪಡೆಯಲು ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
5) 2025-26ನೇ ಸಾಲಿನ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿ ಶುಲ್ಕದ ವಿವರದ ಪಟ್ಟಿಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು.
6) ಇತರೆ ಮಾಹಿತಿಗಾಗಿ ಕಾಲೀಜಿನ ಸೂಚನ ಫಲಕ ಅಥವಾ ಜಾಲತಾಣದಲ್ಲಿ www.ycm.uni-mysore.ac.in ಸಂಪರ್ಕಿಸುವುದು.
7) ಪ್ರವೇಶಾತಿ ಶುಲ್ಕವನ್ನು ಕಾಲೇಜಿಗೆ ಪಾವತಿಸಿದ ನಂತರ ಯಾವುದೇ ಕಾರಣಕ್ಕೂ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ. ವಿದ್ಯಾರ್ಥಿಯು ತನ್ನ ಮೂಲ ದಾಖಲಾತಿಗಳನ್ನು ಪಡೆಯಬೇಕಾದಲ್ಲಿ ಪ್ರವೇಶಾತಿಯ ಪೂರ್ಣ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು. ಇಲ್ಲದಿದ್ದಲ್ಲಿ ಮೂಲ ದಾಖಲಾತಿಗಳನ್ನು ನೀಡುವುದಿಲ್ಲ.
8) ವಿದ್ಯಾರ್ಥಿಯು ಒಮ್ಮೆ ಪ್ರವೇಶಾತಿ ಪಡೆದ ಐಚ್ಛಿಕ ವಿಷಯವನ್ನು ಯಾವುದೇ ಕಾರಣಕ್ಕೂ ಬದಲಾಯಿಸಿಕೊಳ್ಳಲು (No Change of Combination) ಅವಕಾಶವಿರುವುದಿಲ್ಲ.

12/04/2025

Principal
Yuvaraja's College (Autonomous)
University of Mysore
Mysore-570 005